**ಕಾರ್ಮಿಕ ನ್ಯಾಯಾಲಯ, ಮೈಸೂರು.**

**Ref**:6/2024

ಎಂ.ಡಬ್ಲ್ಯೂ- 1

**ದಿನಾಂಕ 08.04.2026 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು**

**ಮುಂದುವರೆದ ಪಾಟೀ ಸವಾಲುಃ 1 ನೇ ಪಕ್ಷಗಾರರ ಪರ ಶ್ರೀ.ಎಲ್. ಎಂ.ಪಿ. ವಕೀಲರಿಂದಃ**

ಈ ಪ್ರಕರಣದಲ್ಲಿ ಕೆಲವು ಪಕ್ಷಗಾರರಿಗೆ ಮುಂಬಡ್ತಿ ನೀಡಿ ಶಮ್ ಷಾ ಬಾದ್ ಘಟಕಕ್ಕೆ ವರ್ಗಾವಣೆ ಮಾಡಿದ್ದು, ಕೆಲವೊಂದು ಪಕ್ಷಗಾರರಿಗೆ ಮುಂಬಡ್ತಿ ನೀಡದೆ ಶಮ್ ಷಾ ಬಾದ್ ಘಟಕಕ್ಕೆ ವರ್ಗಾವಣೆ ಮಾಡಿರುತ್ತೇವೆ ಎಂದರೆ ಸರಿ. ಮುಂಬಡ್ತಿ ನೀಡಿ ವರ್ಗಾವಣೆ ಮಾಡಿದಾಗ ಕಾರ್ಮಿಕರಿಗೆ ವೇತನದಲ್ಲಿ ಹೆಚ್ಚಳ ಮಾಡಿರುತ್ತೇವೆ ಎಂದರೆ ಸರಿ. ಅದೇ ರೀತಿ ವರ್ಗಾವಣೆ ಮಾಡಿದಾಗ ಕೂಡ ವೇತನದಲ್ಲಿ ಹೆಚ್ಚಳ ಮಾಡಿರುತ್ತೇವೆ ಎಂದರೆ ಸರಿ.

ಮೈಸೂರಿನಲ್ಲಿ ಇರುವಂತಹ Shift Working Hours ಬೇರೆ ಶಮ್ ಷಾ ಬಾದ್ ನಲ್ಲಿ ಇರುವ Shift Working Hours ವ್ಯತ್ಯಾಸ ಇರುತ್ತದೆ ಎಂದರೆ ಸಾಕ್ಷಿಯು ಇರಬಹುದು ಎಂದು ಉತ್ತರಿಸಿ, ಆದರೆ ನಾನು ಇಲ್ಲಿ ವಿಚಾರಣೆ ಹೇಳಲು ಬಂದಿರುವುದು ಮೈಸೂರು ಯುನಿಟ್ ವಿಚಾರಕ್ಕೆ ಸಂಬಂಧಿಸಿದಂತೆ ಎನ್ನುತ್ತಾರೆ. ನಾವು ಕೊಟ್ಟಿರುವ ಮುಂಬಡ್ತಿ ಪತ್ರಗಳಲ್ಲಿ ಕೂಡಲೆ ಜಾರಿಯಾಗುವಂತೆ ಎಂದು ತಿಳಿಸಿರುತ್ತೇವೆ ಎಂದರೆ ಸಾಕ್ಷಿಯು ಹೌದು ಎಂದು ಉತ್ತರಿಸಿ, 7 ದಿವಸಗಳ ಕಾಲಾವಾಕಾಶ ಕೊಟ್ಟಿರುತ್ತೇವೆ ಎನ್ನುತ್ತಾರೆ.

ಮೊದಲನೇ ಪಕ್ಷಗಾರರ ಮುಂಬಡ್ತಿ ಮತ್ತು ವರ್ಗಾವಣೆ ಆದೇಶದಲ್ಲಿ ಕೂಡಲೆ ಜಾರಿಗೆ ಬರುವಂತೆ ಎಂದು ತಿಳಿಸಿರುತ್ತೇವೆ ಎಂದರೆ ಸಾಕ್ಷಿಯೂ ಸರಿ ಎಂದು ಉತ್ತರಿಸಿರುತ್ತಾರೆ. ಮುಂಬಡ್ತಿ ಪತ್ರ ಅಥವಾ ವರ್ಗಾವಣೆ ಪತ್ರವನ್ನು ಮೊದಲನೇ ಪಕ್ಷಗಾರರಿಗೆ ಯಾವ ಸಮಯದಲ್ಲಿ ಅಂಚೆ ಮೂಲಕ ಕಳುಹಿಸಿರುತ್ತೇವೆ ಎಂದು ದಾಖಲೆ ಹಾಜರು ಮಾಡಿರುತ್ತೀರಾ ಎಂದರೆ ಸಾಕ್ಷಿಯೂ, ದಾಖಲೆಗಳನ್ನು ನೋಡಿ ಹೇಳಬೇಕಾಗುತ್ತದೆ ಎನ್ನುತ್ತಾರೆ. ಸಾಕ್ಷಿಯೂ ದಾಖಲೆಗಳನ್ನು ಪರಿಶೀಲಿಸಿ, ಅಂಚೆ ರಶೀದಿಗಳು ಯಾವುದು ಲಭ್ಯ ಇರುವುದಿಲ್ಲ ಎನ್ನುತ್ತಾರೆ. ಆ ರೀತಿ ಮೊದಲನೇ ಪಕ್ಷಗಾರರಿಗೆ ಅಂಚೆ ಮುಖಾಂತರ ಮುಂಬಡ್ತಿ ಮತ್ತು ವರ್ಗಾವಣೆ ಪತ್ರವನ್ನು ಕಳುಹಿಸಿರುವ ಬಗ್ಗೆ

ಅಂಚೆ ರಶೀದಿಗಳು ಮತ್ತು ಸ್ವೀಕೃತಿಗಳನ್ನು ಹಾಜರುಪಡಿಸಲು ನಮಗೆ ಯಾವುದೇ ತೊಂದರೆ ಇರುವುದಿಲ್ಲ. ಮೊದಲನೇ ಪಕ್ಷಗಾರರಿಗೆ 15 ದಿವಸಗಳ ಮುಂಚೆ ಸೇವಾ ಷರತ್ತುಗಳು ಬದಲಾವಣೆ ಆಗುತ್ತಿದೆ ಎನ್ನುವುದರ ಬಗ್ಗೆ ಅವರಿಗೆ ಯಾವುದೇ ನೋಟೀಸ್ ನ್ನು ಕೈಗಾರಿಕಾ ವಿವಾದ ಕಾಯಿದೆ ಅಡಿಯಲ್ಲಿ ನೀಡಿರುವುದಿಲ್ಲ ಎಂದರೆ ಸರಿ ಎಂದು ಉತ್ತರಿಸಿ, ನಾವು ಸಂಸ್ಥೆಯ ನಿರ್ಧಾರವನ್ನು ಅನುಸರಿಸುತ್ತೇವೆ ಎನ್ನುತ್ತಾರೆ.

ಶಮ್ ಷಾ ಬಾದ್ ಘಟಕಕ್ಕೆ ಇರುವಂತಹ ಸ್ಥಾಯಿ ಆದೇಶ ಬೇರೆ ಇರುತ್ತದೆ, ಮೈಸೂರು ಘಟಕಕ್ಕೆ ಇರುವ ಸ್ಥಾಯಿ ಆದೇಶ ಬೇರೆ ಇರುತ್ತದೆ ಎಂದರೆ ಸರಿ. ಮೊದಲನೇ ಪಕ್ಷಗಾರರು ಸಂಘದ ಪದಾಧಿಕಾರಿಗಳು ಇರುವುದರಿಂದ ನಾವು ಅವರ ಕೆಲಸವನ್ನು ನಿರಾಕರಣೆ ಮಾಡುವ ನಿರ್ದಾರ ಮಾಡಿದ್ದೆವು ಎಂದರೆ ಸುಳ್ಳು. ದಿನಾಂಕ 11.08.2023 ರಂದು ಕಾರ್ಖಾನೆಯಿಂದ ಮೊದಲನೇ ಪಕ್ಷಗಾರರನ್ನು ಹೊರಗಡೆ ಹೋಗಿ ಎಂದು ಹೇಳುವ ಸಂದರ್ಭದಲ್ಲಿ ವರ್ಗಾವಣೆ ಪತ್ರವನಾಗಿರಬಹುದು ಅಥವಾ ಮುಂಬಡ್ತಿ ಪತ್ರವನ್ನು ಆಗಿರಬಹುದು ನೀಡಿರುತ್ತೀರಾ ಎಂದರೆ ಸಾಕ್ಷಿಯೂ ನೀಡಿರುತ್ತೇವೆ, ಆದರೆ ಅವರು ಅದನ್ನು ಸ್ವೀಕರಿಸಿರುವುದಿಲ್ಲ ಎನ್ನುತ್ತಾರೆ. ಸದರಿ ಕೃತ್ಯ ದುರ್ನಡತೆ ಆಗುತ್ತದೆ ಎಂದು ಮೊದಲನೆ ಪಕ್ಷಗಾರರಿಗೆ ಪತ್ರದ ಮೂಲಕ ತಿಳಿಸಿರುತ್ತೀರಾ ಎಂದರೆ ಸಾಕ್ಷಿಯೂ ವರ್ಗಾವಣೆ ಪತ್ರದ ಹಿಂಭಾಗ ಪುಟದಲ್ಲಿ ತಿಳಿಸಿರುತ್ತೇವೆ ಎನ್ನುತ್ತಾರೆ.

ನಾವು ಮೈಸೂರು ಘಟಕದಿಂದ ಹೊರಗಡೆ ಹೋಗಿ ಎಂದು ಹೇಳುವಾಗ ಪೊಲೀಸ್ ಮುಖಾಂತರ ಅವರನ್ನು ಹೊರಗಡೆ ಹಾಕಿರುತ್ತೇವೆ ಎಂದರೆ ಸರಿಯಲ್ಲ. ನಾವು ಕೊಟ್ಟಿರುವ ವರ್ಗಾವಣೆ ಮುಂಬಡ್ತಿ ಪತ್ರದಲ್ಲಿ Employer ಎಂದು ನಮೂದು ಮಾಡಿರುತ್ತೇವೆ ಎಂದರೆ ಸಾಕ್ಷಿಯೂ ಸುಳ್ಳು Employer ಎಂದು ನಮೂದು ಮಾಡಿರುತ್ತೇವೆ ಎನ್ನುತ್ತಾರೆ. ಸದರಿ ದಾಖಲೆಯಲ್ಲಿ ಕೆಳಭಾಗದಲ್ಲಿ ಸಹಿ ಮಾಡಿರುವ ವ್ಯಕ್ತಿಗಳ ಪೈಕಿ ಸಚಿನ್ ರವರು HR ವಿಭಾಗಕ್ಕೆ ಸಂಬಂಧಪಟ್ಟವರು, ಮತ್ತೊಬ್ಬರು ಹರ್ಷ ಎಂಬುವವರಾಗಿದ್ದು, ಅವರು ನಮ್ಮ Management ಸಿಬ್ಬಂದಿದಯಾಗಿರುತ್ತಾರೆ. ಸದರಿ ಹರ್ಷ ರವರು Admin ಹಾಗೂ HR ವಿಭಾಗಕ್ಕೆ ಸಂಬಂಧಪಟ್ಟ ವ್ಯಕ್ತಿಯಾಗಿರುತ್ತಾರೆ. ಅದರಲ್ಲಿ 3 ನೇ ವ್ಯಕ್ತಿ Security Supervisor ಆಗಿರುತ್ತಾರೆ. ಸದರಿ 3 ಜನ ವ್ಯಕ್ತಿಗಳು ನಮ್ಮ HR Cabin ನಲ್ಲಿ ಕುಳಿತುಕೊಳ್ಳುವ ವ್ಯಕ್ತಿಗಳು ಆಗಿರುವುದಿಲ್ಲ ಎಂದರೆ

ಸರಿಯಲ್ಲ. ಸದರಿ 3 ನೇ ವ್ಯಕ್ತಿಯನ್ನು ನಾವು ಸಾಕ್ಷಿಯ ಉದ್ದೇಶಕ್ಕಾಗಿ ಸಹಿ ಮಾಡಲು ಕರೆದಿದ್ದೆವು ಎನ್ನುತ್ತಾರೆ. ಒಂದು ದಾಖಲೆಯನ್ನು ಸೃಷ್ಟಿ ಮಾಡುವ ಉದ್ದೇಶದಿಂದ ಸದರಿ 3 ಜನ ವ್ಯಕ್ತಿಗಳನ್ನು ನಾವೇ ಸೃಷ್ಟಿ ಮಾಡಿರುತ್ತೇವೆ ಹಾಗೂ ತದ ನಂತರದಲ್ಲಿ ಆ ದಾಖಲೆಯನ್ನು 1 ನೇ ಪಕ್ಷಗಾರರಿಗೆ ಕಳುಹಿಸಿಕೊಟ್ಟಿರುತ್ತೇವೆ ಎಂದರೆ ಸುಳ್ಳು ಎಂದು ಉತ್ತರಿಸಿರುತ್ತಾರೆ. ಮುಂಬಡ್ತಿ ಅಥವಾ ವರ್ಗಾವಣೆ ಪತ್ರಗಳನ್ನು ನೀಡುವ ಸಮಯದಲ್ಲಿ ಸಾಕ್ಷಿ ಸಮೇತ ನೀಡುವ ಪದ್ಧತಿ ಇರುವುದಿಲ್ಲ ಎಂದರೆ ಸರಿಯಲ್ಲ.

ಮೊದಲನೇ ಪಕ್ಷಗಾರರು ಸಂಘದ ಸದಸ್ಯರುಗಳಾಗಿದ್ದ ಕಾರಣ ಅವರುಗಳನ್ನು ಬಲಿ ಪಶುಗಳಾಗಿ ಮಾಡುವ ಉದ್ದೇಶದಿಂದ, ಸದರಿ ದಾಖಲೆಗಳನ್ನು ಸೃಷ್ಟಿ ಮಾಡಿ, ನ್ಯಾಯಾಲಯದ ಮುಂದೆ ಹಾಜರು ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಾನು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನಕ್ಕೆ ಬೆರಳಚ್ಚು ಮಾಡಿದೆ.)

(ಮೇಲಿನ ಸಾಕ್ಷ್ಯವನ್ನು ಸಾಕ್ಷಿಗೆ ಓದಿ, ತಿಳಿಸಿ, ಹೇಳಿದಾಗ, ಅವರು ಅದು ಸರಿ ಇದೆ ಎಂದು ಒಪ್ಪಿದ್ದಾರೆ.)

**ಅಧ್ಯಕ್ಷಾಧಿಕಾರಿಗಳು,**
**ಕಾರ್ಮಿಕ ನ್ಯಾಯಾಲಯ, ಮೈಸೂರು**